ಆಪರೇಷನ್ ಮಾಡಿಸುತ್ತೇವೆ, ಅದು ಮಾಡುತ್ತೇವೆ, ಇದು ಮಾಡುತ್ತೇವೆ, ನಿಮಗೆ ಒಳ್ಳೆಯದು ಮಾಡುತ್ತೇವೆ ಎಂದು ಹೇಳಿ ಅವರ ಮನಪರಿವರ್ತನೆ ಮಾಡಿ ಅವರನ್ನು ಬಲವಂತವಾಗಿ ಮತಾಂತರ ಮಾಡಿಸುತ್ತಿದ್ದಾರೆ. ದಯಮಾಡಿ ಸರ್ಕಾರ ಈ ಬಗ್ಗೆ ಒಂದು ಗಂಭೀರವಾದ ಕ್ರಮವನ್ನು ತೆಗೆದುಕೊಳ್ಳಬೇಕು. ವೈಯುಕ್ತಿಕವಾಗಿ ಅವರು ಯಾವುದೇ ಧರ್ಮವನ್ನು ಆಚರಣೆ ಮಾಡಿದರೆ ಅದಕ್ಕೆ ನಮ್ಮ ಅಭ್ಯಂತರವಿಲ್ಲ. ನಾವೂ ಕೂಡ ಚರ್ಚ್‌ಗಳಿಗೆ ಹೋಗುತ್ತೇವೆ, ಮಸೀದಿಗಳಿಗೆ ಹೋಗುತ್ತೇವೆ, ವಿವಿಧ ಧಾರ್ಮಿಕ ಕ್ಷೇತ್ರಗಳಿಗೂ ಭೇಟಿ ಕೊಡುತ್ತೇವೆ. ಆದರೆ ಇಲ್ಲಿ ಬಹಳಷ್ಟು ಅಮಾಯಕ ಜನರನ್ನು ಅದರಲ್ಲೂ ಬಡವರು ಮತ್ತು ಎಸ್.ಸಿ / ಎಸ್.ಟಿ ಗಳನ್ನು ಗುರಿ ಮಾಡಿಕೊಂಡಿದ್ದಾರೆ. ಕೆಲವೊಂದು ಕಡೆ ಮುಸ್ಲಿಂ ಸಮಾಜದ ಬಂಧುಗಳನ್ನೂ ಕೂಡ ಮತಾಂತರ ಮಾಡಿಸಲಾಗುತ್ತಿದೆ. ದಯಮಾಡಿ ಈ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಮತಾಂತರ ಮಾಡುವುದು ಒಂದು ರೀತಿ chain link ತರಹ ಆಗುತ್ತಿದೆ. ಹಾಗಾಗಿ, ಅಂಥವರ ಮೇಲೆ ಕ್ರಮ ಕೈಗೊಳ್ಳಬೇಕಾಗಿ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :– ಮಾನ್ಯ ಸಭಾಧ್ಯಕ್ಷರೆ, ನಾವು ಮತ್ತೆ ಮತ್ತೆ ಈ ವಿಚಾರವನ್ನು ಹೇಳುತ್ತಿದ್ದೇವೆ. ಶೂನ್ಯವೇಳೆ ಎಂದು ದಿಢೀರನೆ ಪ್ರಸ್ತಾಪವಾಗುತ್ತಿದೆ. ಹೊಸದುರ್ಗ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರನ್ನು ಮತಾಂತರಕ್ಕೆ ಪ್ರಚೋದಿಸುತ್ತಿರುವ ಬಗ್ಗೆ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನಾನು ಇದನ್ನು ಗೃಹ ಸಚಿವರ ಗಮನಕ್ಕೆ ತಂದು ಆಮೇಲೆ ಅವರಿಂದ ಒಂದು ಸ್ಟೇಟ್‌ಮೆಂಟ್ ಮಾಡಿಸುತ್ತೇನೆ.

2. ವಿಷಯ : ಬರ ಪರಿಸ್ಥಿತಿ ಇರುವುದರಿಂದ ಅರಸೀಕೆರೆ ತಾಲ್ಲೂಕಿಗೆ ಕುಡಿಯುವ ನೀರಿಗಾಗಿ ಹೊಸ ಬೋರ್‌ವೆಲ್‌ಗಳನ್ನು ಕೊರೆಯಲು ಹಣ ಬಿಡುಗಡೆ ಮಾಡುವ ಬಗ್ಗೆ.

ಶ್ರೀ ಕೆ. ಎಂ. ಶಿವಲಿಂಗೇಗೌಡ (ಅರಸೀಕೆರೆ) :– ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದ 123 ತಾಲ್ಲೂಕುಗಳಿಗೆ ಬರ ಬಂದಿದೆ ಎನ್ನುವುದು ಸರ್ಕಾರದ ಆದೇಶದಿಂದ ಗೊತ್ತಾಗಿದೆ. ಅದರ ನಿವಾರಣೆಗೆ ಯಾವುದೇ ಕೆಲಸ ಕಾರ್ಯಗಳನ್ನು ಕೈಗೊಂಡಿಲ್ಲ. ನರೇಗಾದಲ್ಲಿ ಮಾಡಿದ್ದೇವೆ ಎಂದು ಹೇಳುತ್ತಾರೆ. ನರೇಗಾದಲ್ಲಿ ಕೆಲಸವನ್ನು ಮಾಡಿದ್ದಾರೆ. ಆದರೆ ಇನ್ನೂ 300 ಕೋಟಿ ರೂಪಾಯಿ ಬಿಡುಗಡೆ ಆಗಬೇಕೆಂದು ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದರು.

ಅಧ್ಯಕ್ಷರು :- ನೀವು ಕೇಳಿರುವುದು ಕುಡಿಯುವ ನೀರಿನ ವಿಚಾರ.

ಶ್ರೀ ಕೆ. ಎಂ. ಶಿವಲಿಂಗೇಗೌಡ :- ಆಯಿತು, ಕುಡಿಯುವ ನೀರಿಗೆ ಸಂಬಂಧಪಟ್ಟಂತೆಯೇ ಮಾತನಾಡುತ್ತೇನೆ. ಮೊದಲು ನಮ್ಮಲ್ಲೆ 300 ಅಡಿ ಕೊರೆದರೆ ನೀರು ಸಿಗುತ್ತಿತ್ತು. ಈಗ 650–700 ಅಡಿಗಳಷ್ಟು ಆಳಕ್ಕೆ ಹೋದರೂ ನೀರು ಸಿಗುತ್ತಿಲ್ಲ. ನೀರು ಇಲ್ಲದೇ ಇರುವಂಥ ಬವಣೆ ಪ್ರತಿ ಗ್ರಾಮದಲ್ಲಿದೆ. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರೂ ಆ ಕಡೆಗೆ ಬರುತ್ತಿಲ್ಲ. ಅವರೂ ಈ ಬಗ್ಗೆ ಗಮನ ಹರಿಸುತ್ತಿಲ್ಲ. ಅಲ್ಲಿ ಯಾವುದೇ ಮೀಟಿಂಗ್ ಆಗಿಲ್ಲ. ಒಂದು constituency ಗೆ 40 ಲಕ್ಷ ರೂಪಾಯಿಗಳನ್ನು ಕೊಟ್ಟರು. ಆ 40 ಲಕ್ಷ ರೂಪಾಯಿಗಳಲ್ಲಿ 50–60 ಬೋರ್‌ವೆಲ್‌ಗಳನ್ನು ಕೊರೆಯಬಹುದು. ಒಂದು ಬೋರ್‌ವೆಲ್‌ಗೆ 50 ಸಾವಿರ ರೂಪಾಯಿ ಎಂದು ಎಸ್ಟಿಮೇಟ್ ಮಾಡಿದರೆ, ಕೊರೆಯುವುದು ಮುಗಿಯುವ ಹೊತ್ತಿಗೆ ಅದು 60–70 ಸಾವಿರ ರೂಪಾಯಿ ಆಗುತ್ತದೆ. ಈಗ ನಮ್ಮ ಜಿಲ್ಲೆಯಲ್ಲಿ ಮತ್ತು ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಬವಣೆ ಜಾಸ್ತಿಯಾಗಿದೆ. ಅದರಲ್ಲೂ ಸಹ ನಮ್ಮ ತಾಲ್ಲೂಕಿನಲ್ಲಿ ಯಾವುದೇ ನದಿ ಮೂಲವಿಲ್ಲ. ಅದು ಬರಡು ಪ್ರದೇಶವಾಗಿರುವುದರಿಂದ ಅಲ್ಲಿ ಕುಡಿಯುವ ನೀರಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡಬೇಕು. ಅದರ ಜೊತೆಗೆ, ಒಂದು ಸಮಸ್ಯೆ ಏನಾಗಿದೆ ಎಂದರೆ, ಕೇಂದ್ರ ಸರ್ಕಾರದ C.R.F. ಅಡಿಯಲ್ಲಿ ಕೊಡುವಂಥ ಹಣದಲ್ಲಿ ಬರೀ flushing ಮಾಡಬೇಕು, ಯಾವುದೇ ಕಾರಣದಿಂದ ಈ ಹಣದಲ್ಲಿ ರೀ–ಬೋರ್ ಕೊರೆಯುವ ಹಾಗಿಲ್ಲ ಎನ್ನುವ ನಿಯಮವಿದೆ. ಆ ನಿಯಮವಿರುವುದರಿಂದ ಸಮಸ್ಯೆಯಾಗುತ್ತಿದೆ. 600 ಅಡಿ ಕೊರೆದರೂ ನೀರು ಸಿಗದೇ ಇರುವಾಗ, 300 ಅಡಿ ಇರುವ ಬೋರ್ ಅನ್ನು flushing ಮಾಡಿದರೆ ನೀರು ಎಲ್ಲಿಂದ ಬರುತ್ತದೆ? ಹಾಗಾಗಿ ಇದಕ್ಕೆಂದು ಕೊಡುವ 25 ಸಾವಿರ ರೂಪಾಯಿ ವೇಸ್ಟ್ ಆಗುತ್ತಿದೆ. ಹೀಗೆ ಸುಮ್ಮನೆ 25 ಸಾವಿರ ರೂಪಾಯಿಗಳನ್ನು ಏಕೆ ವೇಸ್ಟ್ ಮಾಡುತ್ತೀರಿ? ಬೋರ್‌ವೆಲ್ ಕೊರೆಯುವವರು ಸುಮ್ಮನೆ ಅಲ್ಲಿಗೆ ಮೆಷಿನ್‌ಅನ್ನು ತೆಗೆದುಕೊಂಡು ಹೋಗಿ ಡ್ರಿಲ್ ಇಳಿಸುತ್ತಾರೆ, flush ಮಾಡುತ್ತಾರೆ. ಆದರೆ ನೀರು ಬರುವುದಿಲ್ಲ. ಆದ್ದರಿಂದ ಆ ಹಣವನ್ನು ಪರಿವರ್ತನೆ ಮಾಡಿಕೊಡಬೇಕು. ಕೇಂದ್ರ ಸರ್ಕಾರದ ಈ ಯೋಜನೆಯಲ್ಲಿ ಹೊಸ ಬೋರ್ ಕೊರೆಸುವುದಕ್ಕೆ ನಿಯಮಗಳಲ್ಲಿ ಅವಕಾಶವಿಲ್ಲವೆಂದರೆ ಅದನ್ನು R.D.P.R. ಗೆ ಡೈವರ್ಟ್ ಮಾಡಿ, R.D.P.R. ಮುಖಾಂತರ ಹೊಸ ಬೋರ್‌ವೆಲ್‌ಗಳನ್ನು ಕೊರೆಸುವಂಥಾದ್ದು ಆಗಬೇಕು. ಇವತ್ತು 1 ಕೋಟಿ ರೂಪಾಯಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿದೆ. ಆದರೆ ಅದನ್ನು ಬರೀ flushing ಮಾಡಲು ಅಥವಾ

connection ಕೊಡಲು ಉಪಯೋಗಿಸಬೇಕು. ನೀರೇ ಇಲ್ಲದ ಮೇಲೆ connection ಎಲ್ಲಿಗೆ ಕೊಡುವುದು? ಹಾಗಾಗಿ, ಹೊಸ ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕೆ ದಯವಿಟ್ಟು ಈ ಸದನದಲ್ಲಿ ಒಂದು ತೀರ್ಮಾನ ಮಾಡಿ. ಎಲ್ಲ ಶಾಸಕರಿಗೂ ಇದರ ಅವಶ್ಯಕತೆ ಇದೆ ಎಂದು ನಾನು ಭಾವಿಸಿದ್ದೇನೆ. ದಯವಿಟ್ಟು, C.R.F ನಿಂದ ಬರುವಂಥ ಹಣವನ್ನು ಡೈವರ್ಟ್ ಮಾಡಿ ಹೊಸ ಬೋರ್‌ಗಳನ್ನು ಕೊರೆಯುವ ವ್ಯವಸ್ಥೆಗೆ ಕೊಡಬೇಕು. ಶಾಸಕರು 30ನೇ ತಾರೀಖು ತಮ್ಮ ತಮ್ಮ ಕ್ಷೇತ್ರಗಳಿಗೆ ಹೋಗುವುದರೊಳಗೆ ದಯವಿಟ್ಟು ಇದನ್ನು ಮಾಡಿಕೊಟ್ಟರೆ ನಾವು ಮಾನ–ಮರ್ಯಾದೆಗಳನ್ನು ಉಳಿಸಿಕೊಳ್ಳುತ್ತೇವೆ. ಇಲ್ಲದಿದ್ದರೆ ಜನ ನಮ್ಮ ಮಾನ–ಮರ್ಯಾದೆಗಳನ್ನು ಬೀದಿಬೀದಿಗಳಲ್ಲಿ ಕಳೆಯುತ್ತಾರೆ. ನಮಗೆ ಕುಡಿಯುವುದಕ್ಕೆ ನೀಡು ಕೊಡುವುದಿಲ್ಲ, ನೀವು ಏಕೆ ಎಂ.ಎಲ್.ಎ ಗಳಾಗಿದ್ದೀರಿ ಎಂದು ಬೀದಿ ಬೀದಿಗಳಲ್ಲಿ ಮಾತನಾಡುತ್ತಾರೆ. ದಯವಿಟ್ಟು ಹೊಸ ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನ ಹರಿಸಬೇಕು. ಜಿಲ್ಲಾ ಉಸ್ತುವಾರಿ ಸಚಿವರು ನಮ್ಮ ಕ್ಷೇತ್ರಕ್ಕೆ ಬಂದು ಸಭೆ ನಡೆಸಿ ಏನೇನು ಮಾಡಿಕೊಡಬೇಕೋ ಅದನ್ನು ದಯವಿಟ್ಟು ಮಾಡಿಕೊಡಬೇಕು.

ಶ್ರೀ ಡಿ. ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) :– ಮಾನ್ಯ ಸಭಾಧ್ಯಕ್ಷರೆ, ಅರಸೀಕೆರೆ ತಾಲ್ಲೂಕಿಗೆ ಬರ ಪರಿಹಾರ ಶೀರ್ಷಿಕೆಯಡಿಯಲ್ಲಿ ಈಗಾಗಲೇ ಒಂದಷ್ಟು ಹಣವನ್ನು ಒದಗಿಸಿದ್ದೇವೆ. ಅರಸೀಕೆರೆ ತಾಲ್ಲೂಕಿಗೆ ಕುಡಿಯುವ ನೀರಿನ ಪುನಶ್ಚೇತನ ಕಾಮಗಾರಿಗಳಿಗೆ ದಿನಾಂಕ 21–11–2011 ರಂದು ಮತ್ತು 9–12–2011 ರಂದು ಸುಮಾರು 197 ಕಾಮಗಾರಿಗಳಿಗೆ ಸುಮಾರು 69.45 ಲಕ್ಷ ರೂಪಾಯಿಗಳ ಅಂದಾಜು ಮೊತ್ತದಲ್ಲಿ ಸುಮಾರು 48.61 ಲಕ್ಷ ರೂಪಾಯಿ ಹಣವನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಅದರಲ್ಲಿ ಕಾಮಗಾರಿಗಳನ್ನು ತಕ್ಷಣ ಅನುಷ್ಠಾನ ಮಾಡಬೇಕು ಎಂದು ಹೇಳಿದ್ದೇವೆ. ಅದರ ಜೊತೆಗೆ, ಸುಮಾರು 28.35 ಲಕ್ಷ ರೂಪಾಯಿಗಳನ್ನು ಪೈಪ್‌ಲೈನ್ ವಿಸ್ತರಣೆ ಮಾಡುವಂಥ ಕೆಲಸಕಾರ್ಯಗಳಿಗೆ ಕೊಡುವಂಥಾದ್ದನ್ನು ಮಾಡಿದ್ದೇವೆ. ಒಂದು ಪ್ರಸ್ತುತ ಸಂಗತಿ ಎಂದರೆ, C.R.F. Guidelines ನಲ್ಲಿ ಹೊಸ ಬೋರ್‌ವೆಲ್‌ಗಳನ್ನು ಕೊರೆಯಲು ಅವಕಾಶವಿಲ್ಲ. ಇತ್ತೀಚೆಗೆ ನಾವು ಜಿಲ್ಲಾಧಿಕಾರಿಗಳಿಗೆ ವಿಶೇಷವಾದಂಥ ಅನುದಾನವನ್ನು ಬಿಡುಗಡೆ ಮಾಡಿದ್ದೇವೆ. ಕಳೆದ ಬಾರಿ 36 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇತ್ತೀಚೆಗೆ 19 ಕೋಟಿ ರೂಪಾಯಿಗಳನ್ನು R.D.P.R. ವತಿಯಿಂದ ಬಿಡುಗಡೆ ಮಾಡಿದ್ದೇವೆ.

55 ಲಕ್ಷ ರೂಪಾಯಿಗಳಲ್ಲಿ 95 ಬೋರ್‌ವೆಲ್‌ಗಳನ್ನು ಕೊರೆಯುವಂಥದ್ದು ಆಗಿದೆ. 2011–12ನೇ ಸಾಲಿನಲ್ಲಿ ಸುಮಾರು ಇಂಥ 209 ಕೆಲಸ ಕಾರ್ಯಗಳಿಗೆ ಸುಮಾರು 855 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಶಿವಲಿಂಗೇಗೌಡರು ಹೇಳಿದಂತೆ, ಅಲ್ಲಿ ಇನ್ನೂ ಹೆಚ್ಚಿನ ಕುಡಿಯುವ ನೀರಿನ ಅವಶ್ಯಕತೆ ಇದ್ದರೆ, ಅವರು ತಮ್ಮ ಬೇಡಿಕೆಯನ್ನು ಮಂಡನೆ ಮಾಡಿದರೆ ನಾವು R.D.P.Rಗೆ ಹೇಳಿ ತಕ್ಷಣ ಹಣ ಬಿಡುಗಡೆ ಮಾಡುವಂಥ ಕೆಲಸವನ್ನು ಮಾಡುತ್ತೇವೆ. ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಕುಡಿಯುವ ನೀರಿನ ತೊಂದರೆಗಳಿವೆ, ಆ ಎಲ್ಲಾ ಭಾಗದಲ್ಲೂ ನಾವು ಗಂಭೀರವಾದ ಚಿಂತನೆಯನ್ನು ಮಾಡಿದ್ದೇವೆ. ಇದು ನಿಮಗೂ ಗೊತ್ತಿರಬಹುದು. ಅದನ್ನು ನಾನು ಬರಪರಿಹಾರ ಕಾಮಗಾರಿಯ ಉತ್ತರದಲ್ಲೂ ಉಲ್ಲೇಖ ಮಾಡುತ್ತೇನೆ. ಈ ಬಗ್ಗೆ ನಾನು ಎರಡು ಬಾರಿ ಜಿಲ್ಲಾಧಿಕಾರಿಗಳ ಜೊಗೆ C.E.O. ಗಳ ಜೊತೆ Video Conferencing ಮಾಡಿದ್ದೇನೆ. ಬೇರೆಬೇರೆ ಜಿಲ್ಲೆಗಳಿಗೆ ಪ್ರವಾಸ ಹೋದಂಥ ಸಂದರ್ಭಗಳಲ್ಲೂ ಸಾಕಷ್ಟು ಹೇಳಿದ್ದೇನೆ. ಇನ್ನೂ ಹೆಚ್ಚಿನ ಬೇಡಿಕೆ ಇದ್ದರೆ ಅವರು ಮಂಡನೆ ಮಾಡಿದರೆ ನಾನು ತಕ್ಷಣ R.D.P.R. ನವರ ಜೊತೆ ಮಾತನಾಡಿ ಹಣ ಬಿಡುಗಡೆ ಮಾಡಿಸುವಂಥ ಕೆಲಸವನ್ನು ಮಾಡುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ :– ನೀವು ಕೊಟ್ಟಿರುವ ಹಣದಲ್ಲಿ ಕೆಲಸ ಮಾಡಲು ಆಗುತ್ತಿಲ್ಲ. ನೀವು 197 ಕಾಮಗಾರಿಗಳನ್ನು ಅಪ್ರೂವ್ ಮಾಡಿದ್ದೇವೆ ಎಂದು ಹೇಳಿದಿರಿ. ಅವೆಲ್ಲವೂ flushing ಗೆ ಸಂಬಂಧಿಸಿದ್ದು. Flushing ನಲ್ಲಿ ನೀರು ಬರುವುದಿಲ್ಲ. ಆದ್ದರಿಂದ ದಯವಿಟ್ಟು ನಮಗೆ R.D.P.R. ಮುಖಾಂತರ ಬೋರ್ ಕೊರೆಸಲಿಕ್ಕೆ ಹಣವನ್ನು ಕೊಡಿ. C.R.F. ಹಣವನ್ನು ಹೊಸ ಬೋರ್‌ವೆಲ್‌ಗಳಿಗೆ ಕೊಡಿ.

ಅಧ್ಯಕ್ಷರು :– ಇದು zero hour. ಶಿವಲಿಂಗೇಗೌಡರೆ, ನೀವು ಪ್ರಸ್ತಾಪ ಮಾಡಿದ್ದೀರಿ. ಮತ್ತೆ ಅದನ್ನೇ ಹೇಳುತ್ತಿದ್ದೀರಿ. ಮುಖ್ಯಮಂತ್ರಿಗಳು ಹೇಳಿದ್ದಾರಲ್ಲ? ಶೂನ್ಯವೇಳೆಯಲ್ಲಿ ಉಪಪ್ರಶ್ನೆಗಳಿಗೆ ಅವಕಾಶವಿಲ್ಲ.

ಶ್ರೀ ಕೆ.ಎಂ. ಶಿವಲಿಂಗೇಗೌಡ :– ಅವರು ಅದನ್ನೇ ಹೇಳಲಿ. ಬಿಡುಗಡೆ ಮಾಡುತ್ತೇವೆ ಎಂದು ಅವರು ಹೇಳಿದರೆ ಸುಮ್ಮನಾಗಬಹುದು.

ಅಧ್ಯಕ್ಷರು :– ಆಯಿತು.